


## ದೀಪಾವಳಿಗೆ 'ಸಲಾರ್'?

'ಸಲಾರ್' ಸಿನಿಮಾದ 300 ವಿಎಫ್‌ಎಕ್ಸ್ ಶಾಟ್‌ಗಳು ಅಂದುಕೊಂಡಿದ್ದ ಹೊತ್ತಿಗೆ ಸಿದ್ಧವಾಗದ ಕಾರಣ ಬಿಡುಗಡೆ ದಿನಾಂಕವನ್ನು ಎರಡು ತಿಂಗಳ ಮಟ್ಟಿಗೆ ಮುಂದೂಡಲಾಗಿದೆ. ಚಿತ್ರವು ಸೆಪ್ಟೆಂಬರ್ 28ಕ್ಕೆ ಬಿಡುಗಡೆಯಾಗಲಿದೆ ಎಂದು ತಂಡ ಅದಾಗಲೇ ಪ್ರಕಟಿಸಿತ್ತು. ಮುಂಗಡ ಬುಕಿಂಗ್ ಎಂದಿನಿಂದ ಎಂದು ಪ್ರೇಕ್ಷಕರೂ ಎದುರುನೋಡುತ್ತಿದ್ದರು. ವಿಎಫ್‌ಎಕ್ಸ್ ಕೆಲಸಗಳು ಪೂರ್ಣಗೊಂಡ ನಂತರ ಮತ್ತೊಮ್ಮೆ ಕ್ರಾಸ್‌ಚೆಕ್ ಮಾಡಬೇಕಾಗಿರುವುದರಿಂದ ಇದೀಗ ಚಿತ್ರ ಬಿಡುಗಡೆ ಮುಂದಕ್ಕೆ ಹೋಗಿದೆ.

'ಕೆಜಿಎಫ್' ಆವೃತ್ತಿಗಳ ನಿರ್ದೇಶಕ ಪ್ರಶಾಂತ್ ನೀಲ್ ಆ್ಯಕ್ಷನ್–ಕಟ್ ಹೇಳಿರುವ ಈ ಸಿನಿಮಾದಲ್ಲಿ ಪ್ರಭಾಸ್, ಶ್ರುತಿ ಹಾಸನ್, ಪೃಥ್ವಿರಾಜ್ ಸುಕುಮಾರನ್ ಅಭಿನಯಿಸಿದ್ದಾರೆ. ಈಗಾಗಲೇ ಚಿತ್ರಮಂದಿರಗಳಲ್ಲಿ ಇದರ ಟ್ರೇಲರ್ ಪ್ರದರ್ಶಿತವಾಗುತ್ತಿದೆ.

ದೀಪಾವಳಿ ಸಂದರ್ಭದಲ್ಲಿ 'ಸಲಾರ್' ತೆರೆಕಾಣುವ ನಿರೀಕ್ಷೆ ಇದ್ದು, ಅದೇ ಹೊತ್ತಿಗೆ ಸಲ್ಮಾನ್ ಖಾನ್ ಅಭಿನಯದ 'ಟೈಗರ್ 3' ಕೂಡ ಬಿಡುಗಡೆಯಾಗುವ ಸಾಧ್ಯತೆ ಇದೆ. ಇಬ್ಬರು ಸೂಪರ್‌ಸ್ಟಾರ್‌ಗಳ ಸಿನಿಮಾಗಳು ಏಕಕಾಲದಲ್ಲಿ ಬಿಡುಗಡೆಯಾಗುವುದು ಅಪರೂಪ.

'ಸಲಾರ್' ಚಿತ್ರಕ್ಕೆಂದು 300 ವಿಎಫ್‌ಎಕ್ಸ್ ಶಾಟ್‌ಗಳನ್ನು ಸೃಷ್ಟಿಸುವ ಕೆಲಸ ವಹಿಸಿಕೊಡಲು ಹತ್ತು ಕಂಪನಿಗಳನ್ನು ಪಟ್ಟಿ ಮಾಡಲಾಗಿತ್ತು. ಅದರಲ್ಲಿ ಒಂದು ಕಂಪನಿ ಈಗಾಗಲೇ ಹೆಚ್ಚಿನ ಕೆಲಸಗಳನ್ನು ಒಪ್ಪಿಕೊಂಡಿದ್ದರಿಂದ ಅದು 'ಸಲಾರ್' ಸಿನಿಮಾ ವಿಎಫ್‌ಎಕ್ಸ್ ಸೃಷ್ಟಿಯ ಯೋಜನೆಯನ್ನು ಒಪ್ಪಿಕೊಳ್ಳಲಿಲ್ಲ. ಇದರಿಂದಾಗಿ ಚಿತ್ರತಂಡದವರು ಬೇರೆ ಕಂಪನಿಗಳಿಂದ ವಿಎಫ್‌ಎಕ್ಸ್ ಕೆಲಸ ಮಾಡಿಸಬೇಕಿದೆ. ಅದು ನಿಗದಿತ ಸಮಯದೊಳಗೆ ಲಭ್ಯವಾಗದಿದ್ದರೆ ಚಿತ್ರ ಬಿಡುಗಡೆ ಮಾಡುವುದು ಕಷ್ಟವಾಗಲಿದೆ. ಕೊನೆಯ ಕ್ಷಣದಲ್ಲಿ ಪರದಾಡುವುದು ಸರಿಯಲ್ಲ ಎಂದು ಚಿತ್ರ ತೆರೆಕಾಣಿಸುವ ದಿನವನ್ನೇ ಮುಂದೂಡಲಾಗಿದೆ. ಸಿನಿಮಾ ನಿರ್ಮಿಸಿರುವ ಹೊಂಬಾಳೆ ಫಿಲ್ಮ್ಸ್ ಬಿಡುಗಡೆ ದಿನಾಂಕ ಮುಂದೂಡಿರುವುದನ್ನು ಸೆ. 13ರಂದು ಅಧಿಕೃತವಾಗಿ ಪ್ರಕಟಿಸಿತು. ■

# ಕರೀನಾ... ಮೌನ ಸರೀನಾ?

**'Well Said Murthy'** — ಹೀಗೆ ಪ್ರತಿಕ್ರಿಯಿಸಿದವರು ಸುಸೇನ್ ಖಾನ್; ಹೃತಿಕ್ ರೋಷನ್ ಪತ್ನಿ. ಅವರು ಉಲ್ಲೇಖಿಸಿದ ಮೂರ್ತಿ ಎಂದರೆ ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ. ಕರೀನಾ ಕಪೂರ್ ವಿಷಯವಾಗಿ ನಾರಾಯಣಮೂರ್ತಿ ಅವರು 2019ರ ಸಂದರ್ಶನವೊಂದರಲ್ಲಿ ಹೇಳಿದ ಮಾತೊಂದಕ್ಕೆ ಸುಸೇನ್ ಈ ರೀತಿ ಪ್ರತಿಕ್ರಿಯೆ ನೀಡಿದ್ದು ಇತ್ತೀಚೆಗೆ. ಆಗ ನಾರಾಯಣಮೂರ್ತಿ ಆಡಿದ್ದ ಮಾತಿನ ಹಿಂದೆ ಒಂದು ಸಣ್ಣ ಘಟನೆ ಇದೆ.

ಲಂಡನ್‌ನಿಂದ ನಾರಾಯಣಮೂರ್ತಿ ಒಮ್ಮೆ ಭಾರತಕ್ಕೆ ಮರಳುತ್ತಿದ್ದರು. ಅವರು ಇದ್ದ ವಿಮಾನದಲ್ಲಿ ಪಕ್ಕದ ಸೀಟಿನಲ್ಲೇ ನಟಿ ಕರೀನಾ ಕಪೂರ್ ಕೂಡ ಇದ್ದರು. ಅಭಿಮಾನಿಗಳು ಅವರಿಗೆ 'ಹಾಯ್', 'ಹಲೊ' ಹೇಳುತ್ತಿದ್ದರು. ಆದರೆ, ಯಾರದೇ ನಗು–ನುಡಿಗೆ ಕರೀನಾ ಉಭ–ಶುಭ ಎನ್ನಲಿಲ್ಲ. ಮುಖದ ಗೆರೆಗಳು ಹಾಗೆಯೇ ಬಿಗಿಯಾಗಿದ್ದವು. ಕನಿಷ್ಠ ತುಟಿ ಮೇಲೆ ಒಂದು ಮಂದಹಾಸವೂ ಮೂಡಲಿಲ್ಲ. ಇದನ್ನು ನೋಡಿದ ನಾರಾಯಣಮೂರ್ತಿ ಚಕಿತಗೊಂಡಿದ್ದರು. ಅದನ್ನು ಅವರು ಐಐಟಿ ಕಾನ್ಪುರ್‌ನಲ್ಲಿ ನಡೆದ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದರು. ಆ ವಿಡಿಯೊ ತುಣುಕು ಇತ್ತೀಚೆಗೆ ಹರಿದಾಡಿತು. ಅದಕ್ಕೆ ಸುಸೇನ್ ಪ್ರತಿಕ್ರಿಯೆ ನೀಡಿದ್ದು.

'ಅಭಿಮಾನಿಗಳು ಸಹಜವಾಗಿಯೇ ಕುತೂಹಲದಿಂದ ನೆಚ್ಚಿನ ತಾರೆಯರನ್ನು ಮಾತನಾಡಿಸುತ್ತಾರೆ. ಕರೀನಾ ಅದೇಕೊ ಒಬ್ಬರಿಗೂ ವಿಶ್ ಮಾಡಲಿಲ್ಲ. ಕನಿಷ್ಠ ನಗುವಿನ ಮೂಲಕವಾದರೂ ಪ್ರತಿಕ್ರಿಯಿಸಬಹುದಿತ್ತು. ನನ್ನನ್ನು ಗುರುತು ಹಿಡಿದವರೂ ಬಂದು ಮಾತನಾಡಿಸುತ್ತಾರೆ. ಅವರ ಜತೆಗೆ ಒಂದೋ ಒಂದೂವರೆ ನಿಮಿಷವೋ ಮಾತನಾಡುವುದು ನನ್ನ ಜಾಯಮಾನ. ಕರೀನಾ ಹಾಗೆ ಸುಮ್ಮನೆ ಇದ್ದದ್ದು ಕಂಡು ನನಗೆ ಆಶ್ಚರ್ಯವಾಯಿತು. ತಾರೆಯರು ತಮ್ಮನ್ನು ಇಷ್ಟಪಡುವವರ ಜೊತೆ ಸ್ವಲ್ಪ ಮಟ್ಟಿಗೆ ಬೆರೆಯಬೇಕು' ಎಂದು ನಾರಾಯಣಮೂರ್ತಿ ಹೇಳಿದ್ದರು. ಕೋಟಿಗಟ್ಟಲೆ ಅಭಿಮಾನಿಗಳನ್ನು ನೋಡಿ ನೋಡಿ ಸಾಕಾಗಿಹೋಗಿರುವುದರಿಂದ ಕರೀನಾ ಸುಮ್ಮನೆ ಕುಳಿತಿರಬಹುದು ಎನ್ನುವುದು ಆಗ ಸುಧಾ ಮೂರ್ತಿ ನೀಡಿದ ಪ್ರತಿಕ್ರಿಯೆಯಾಗಿತ್ತು. ಹೃತಿಕ್ ರೋಷನ್ ಜತೆಗೂ ಕರೀನಾ ಕೆಲವು ಸಿನಿಮಾಗಳಲ್ಲಿ ಅಭಿನಯಿಸಿದ್ದು, ಈಗ ಸುಸೇನ್ ಪ್ರತಿಕ್ರಿಯೆ ನೀಡಿರುವುದನ್ನು ಅನೇಕರು ಪರಿಪರಿಯಾಗಿ ವಿಶ್ಲೇಷಿಸತೊಡಗಿದ್ದಾರೆ. ■

